**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-560001**

ಸಂಖ್ಯೆ:ಸಿ1(4)ವರ್ಗಾವಣೆ/01/2020-21 ದಿನಾಂಕ:11/11/2020

**ಅಧಿಕೃತ ಜ್ಞಾಪನ**

**ವಿಷಯ:**-2019-20ನೇ ಸಾಲಿನಲ್ಲಿ ಕಡ್ಡಾಯ/ಹೆಚ್ಚುವರಿಯಾಗಿ ತಾಲ್ಲೂಕಿನಿಂದ/ಜಿಲ್ಲೆಯಿಂದ ಹೊರಗಡೆ ವರ್ಗಾವಣೆಯಾಗಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರುಗಳಿಗೆ ವರ್ಗಾವಣೆಗಳನ್ನು ಗಣಕೀಕೃತ ಕೌನ್ಸಿಲಿಂಗ್ ಮೂಲಕ ನಡೆಸುವ ಬಗ್ಗೆ.

**ಉಲ್ಲೇಖ:**-ಸರ್ಕಾರದ ಪತ್ರ ಸಂಖ್ಯೆ ಇಡಿ 26 ಇಟಿಆರ್ 2020 ದಿನಾಂಕ.05.10.2020

*****

2019-20 ನೇ ಸಾಲಿನಲ್ಲಿ ಕಡ್ಡಾಯ/ಹೆಚ್ಚುವರಿಯಾಗಿ ತಾಲ್ಲೂಕಿನಿಂದ/ಜಿಲ್ಲೆಯಿಂದ ಹೊರಗಡೆ ವರ್ಗಾವಣೆಯಾಗಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರುಗಳಿಗೆ ಅವರು ಕರ್ತವ್ಯ ನಿರ್ವಹಿಸುತ್ತಿದ್ದ ಜಿಲ್ಲೆಯ ಒಳಗೆ ಲಭ್ಯವಿರುವ ಖಾಲಿ ಹುದ್ದೆಗಳಿಗೆ/ಅವರು ಬಯಸುವ ಅಕ್ಕಪಕ್ಕದ ತಾಲ್ಲೂಕುಗಳಲ್ಲಿ ಲಭ್ಯವಿರುವ ಹುದ್ದೆಗಳಿಗೆ ಪ್ರಸ್ತುತ ಸಾಲಿಗೆ ಮಾತ್ರ ಸೀಮಿತವಾದಂತೆ ವರ್ಗಾವಣೆಯನ್ನು ಜಾರಿಗೊಳಿಸಲು ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ನಿರ್ದೇಶನವಿರುತ್ತದೆ.

2019-20ನೇ ಸಾಲಿನ ಶಿಕ್ಷಕರ ಸಾಮಾನ್ಯ ವರ್ಗಾವಣೆಯ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮಗಳು 2017ರ ಶಿಕ್ಷಕರ ವರ್ಗಾವಣೆ ಕಾಯ್ದೆ ಸೆಕ್ಷನ್ 3(ಎ) ಮತ್ತು ನಿಯಮ 6(3)(i),(ii)(iv)ರ ಅಡಿಯಲ್ಲಿ ಕೆಲವು ಶಿಕ್ಷಕರು ತಾಲ್ಲೂಕಿನಿಂದ/ಜಿಲ್ಲೆಯಿಂದ ಹೊರಗಡೆ ವರ್ಗಾವಣೆಯಾಗಿದ್ದು, ಅಂತಹ ಶಿಕ್ಷಕರುಗಳಿಗೆ ಆಗಿರುವ ಅನಾನುಕೂಲವನ್ನು ಸರಿಪಡಿಸುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು(ಶಿಕ್ಷಕರ ವರ್ಗಾವಣೆ ನಿಯಂತ್ರಣ) ಅಧಿನಿಯಮ 2020 ನಿಯಮ 9(ii) ರಂತೆ ವರ್ಗಾವಣೆ ಪ್ರಕ್ರಿಯೆ ಕೈಗೊಳ್ಳಲು ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಿದೆ.

**ಮಾರ್ಗಸೂಚಿ**

| ಕ್ರ.ಸಂ. | ವಿವರಣೆ | ದಿನಾಂಕ | ನಿರ್ವಹಿಸುವ ಪ್ರಾಧಿಕಾರ |
|---|---|---|---|
| 01 | ವರ್ಗಾವಣೆ ಅಧಿಸೂಚನೆ ವೇಳಾ ಪಟ್ಟಿ ಪ್ರಕಟಣೆ | 11.11.2020 | ಆಯುಕ್ತರ ಕಛೇರಿ |
| 02 | ಕಡ್ಡಾಯ/ಹೆಚ್ಚುವರಿಯಾಗಿ ತಾಲ್ಲೂಕು/ ಜಿಲ್ಲೆಯಿಂದ ಹೊರಗೆ ವರ್ಗಾವಣೆಗೊಂಡ ಶಿಕ್ಷಕರ ಪಟ್ಟಿ ಪ್ರಕಟಣೆ | 17.11.2020 | ಆಯುಕ್ತರ ಕಛೇರಿ |
| 03 | ಮೇಲ್ಕಂಡಂತೆ ಪ್ರಕಟಿಸಲಾದ ಪಟ್ಟಿಗೆ ಶಿಕ್ಷಕರಿಂದ ಆಕ್ಷೇಪಣೆಗಳು ಸಲ್ಲಿಕೆಯಾದಲ್ಲಿ, ಅವುಗಳನ್ನು ಪರಿಶೀಲಿಸಿ ಅಂತಿಮಗೊಳಿಸುವುದು | 20.11.2020 ರಿಂದ 23.11.2020 | ಉಪನಿರ್ದೇಶಕರು(ಆಡಳಿತ) |
| 04 | ಪಟ್ಟಿಯಲ್ಲಿ ಪ್ರಕಟವಾದ ಆಸಕ್ತ ಶಿಕ್ಷಕರು ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸುವುದು. | 24.11.2020 ರಿಂದ 30.11.2020 | ಆಸಕ್ತ ಶಿಕ್ಷಕರು |
| 05 | ತಂತ್ರಾಂಶದಲ್ಲಿ ಅರ್ಜಿಗಳನ್ನು ಅಂತಿಮಗೊಳಿಸುವುದು. | 01.12.2020 ರಿಂದ 05.12.2020 | ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು |
| 06 | ಅಂತಿಮ ಕೌನ್ಸೆಲಿಂಗ್ ಅರ್ಹತಾ ಪಟ್ಟಿ ಪ್ರಕಟಣೆ | 14.12.2020 | ಉಪನಿರ್ದೇಶಕರು(ಆಡಳಿತ) |

**[ಪುಟ...2ಕ್ಕೆ]**

| ಕ್ರ.ಸಂ. | ವಿವರಣೆ | ದಿನಾಂಕ | ನಿರ್ವಹಿಸುವ ಪ್ರಾಧಿಕಾರ |
|---|---|---|---|
| 07 | ಕೌನ್ಸಿಲಿಂಗ್ ಪ್ರಕ್ರಿಯೆ(ಪ್ರಾಥಮಿಕ) | 16.12.2020 ರಿಂದ 17.12.2020 | ಉಪನಿರ್ದೇಶಕರು(ಆಡಳಿತ) |
| 08 | ಕೌನ್ಸಿಲಿಂಗ್ ಪ್ರಕ್ರಿಯೆ(ಪ್ರೌಢ) | 18.12.2020 ರಿಂದ 19.12.2020 | ಸಂಬಂಧಿಸಿದ ವಿಭಾಗೀಯ ಸಹನಿರ್ದೇಶಕರು |

ವರ್ಗಾವಣೆ ಕೌನ್ಸಿಲಿಂಗ್ ನಡೆದ ನಂತರ ಸ್ಥಳನಿಯುಕ್ತಿ ಆದೇಶಗಳನ್ನು ತಂತ್ರಾಂಶದಲ್ಲಿ ಆಯಾ ದಿನದಂದೇ ಅಪ್‌ಲೋಡ್ ಮಾಡುವುದು ಕಡ್ಡಾಯವಾಗಿರುತ್ತದೆ.ಈ ಸಂಬಂಧ ಆಯಾ ವರ್ಗಾವಣಾ ಸಕ್ಷಮ ಪ್ರಾಧಿಕಾರಿಗಳು ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

[ಅನ್ಬುಕುಮಾರ್ .ವಿ.]
ಆಯುಕ್ತರು

ಇವರಿಗೆ, ಅಗತ್ಯ ಕ್ರಮಕ್ಕಾಗಿ

1. ಸಹ ನಿರ್ದೇಶಕರು, ಬೆಂಗಳೂರು/ಮೈಸೂರು/ಅಪರ ಆಯುಕ್ತರ ಕಛೇರಿ ಕಲ್ಬುರ್ಗಿ/ಧಾರವಾಡ
2. ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು/ಮೈಸೂರು /ಬೆಳಗಾವಿ/ಕಲಬುರಗಿ
3. ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ)
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ (ಉಪನಿರ್ದೇಶಕರು[ಆಡಳಿತ] ರವರ ಮೂಲಕ)

ಪ್ರತಿಯನ್ನು:-

1. ಸರ್ಕಾರದ ಕಾರ್ಯದರ್ಶಿಗಳು (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು-1 ರವರ ಆದ್ಯ ಅವಗಾಹನೆಗಾಗಿ.
2. ಆಪ್ತ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ಇವರಿಗೆ ಮಾಹಿತಿಗಾಗಿ .
3. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ/ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ರಾಜ್ಯ ಯೋಜನಾ ನಿರ್ದೇಶಕರ ಕಛೇರಿ ಬೆಂಗಳೂರು.
4. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ ಮಾಹಿತಿಗಾಗಿ ಕಳುಹಿಸಿದೆ.
5. ಜಂಟಿ ನಿರ್ದೇಶಕರು (ಆಡಳಿತ) ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ.
6. ಆಪ್ತ ಕಾರ್ಯದರ್ಶಿಯವರು, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ
7. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರುಗಿ/ಧಾರವಾಡ
8. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರು ರವರುಗಳಿಗೆ.
9. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹನಿರ್ದೇಶಕರು ಹಾಗೂ ಪದನಿಮಿತ್ತ ವಿಭಾಗೀಯ ಕಾರ್ಯದರ್ಶಿಗಳು ರವರಿಗೆ.
10. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ಶಾಖೆ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು-01 ರವರಿಗೆ ಪ್ರತಿಯನ್ನು ರವಾನಿಸುತ್ತಾ, ಉದ್ದೇಶಿತ ವರ್ಗಾವಣೆ ಪ್ರಕ್ರಿಯೆಗೆ "ತಂತ್ರಾಂಶವನ್ನು" ನಿಯಮಗಳಡಿ ಸಜ್ಜುಗೊಳಿಸಿ ಯಾವುದೇ ಲೋಪಗಳು ಉದ್ಭವಿಸದಂತೆ, ಸೂಕ್ತ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ.
11. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)
12. ರಾಜ್ಯದ ಎಲ್ಲಾ ತಾಲ್ಲೂಕ್ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳವರಿಗೆ